**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಾಂತರಮ್ ಬುಡ್ನಾ ಸಿದ್ದ ರವರ ನಿಯಮದ ರಡಿಯಲ್ಲಿ**

**ಗಮನ ಸೆಳೆಯುವ ಸೂಚನೆ ಸಂಖ್ಯೆ: 69ಕ್ಕೆ ಉತ್ತರ**

ವಿಷಯ: ಉತ್ತರ ಕನ್ನಡ ಜಿಲ್ಲೆಯಲ್ಲಿ 60 ಸಾವಿರಕ್ಕೂ ಮಿಕ್ಕಿ ಅರಣ್ಯ ವಾಸಿ ಕುಟುಂಬಗಳಿದ್ದೂ, ಸದ್ರಿ ಕುಟುಂಬಗಳನ್ನು ಹಕ್ಕು ಪತ್ರ ನೀಡುವ ತನಕ ಒಕ್ಕಲೆಬ್ಬಿಸಬಾರದು ಎಂಬ ಸೂಚನೆ ಇದ್ದರೂ ಅಧಿಕಾರಿಗಳು ಬಡ ಅರಣ್ಯವಾಸಿಗಳಿಗೆ ಕಿರಕುಳ ಕೊಡುತ್ತಿರುವ ಬಗ್ಗೆ.

*****

**ಉತ್ತರ:–**

ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ 88453 ಅರ್ಜಿಗಳು ಅರಣ್ಯ ಹಕ್ಕು ಕಾಯ್ದೆ ವಿವಿಧ ಸಮಿತಿಗಳ ವ್ಯಾಪ್ತಿಯಲ್ಲಿ ಇತ್ಯರ್ಥ ಮಾಡಲು ಬಾಕಿ ಇರುತ್ತದೆ. ಈ ಒತ್ತುವರಿ ಪ್ರಕರಣಗಳನ್ನು ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 64 (ಎ) ಪ್ರಕಾರ ಅರಣ್ಯ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ವಿಚಾರಣೆ ನಡೆಸುತ್ತಿದ್ದು. ಹಾಗೂ ಅರಣ್ಯ ಸಂರಕ್ಷಣಾಧಿಕಾರಿ, ಕೆನರಾ ವೃತ್ತ ಶಿರಸಿ ರವರ ಕಛೇರಿಯಲ್ಲಿ ಮೇಲ್ಮನವಿಗಳ ವಿಚಾರಣೆ ನಡೆಯುತ್ತಿದೆ.

ಅರಣ್ಯ ಹಕ್ಕು ಕಾಯ್ದೆ 2005 ರ ಭಾಗ–3 ಸೆಕ್ಷನ್ 4(5) ರ ಪ್ರಕಾರ

"Save as otherwise provided, no member of a forest dwelling Scheduled Tribe or other traditional forest dweller shall be evicted or removed from forest land under his occupation till the recognition and verification process is complete" ಈ ರೀತಿ ಅರಣ್ಯ ಹಕ್ಕು ಕಾಯ್ದೆಯಲ್ಲಿ ಅರ್ಜಿ ಇತ್ಯರ್ಥವಾಗುವವರೆಗು ಅರಣ್ಯ ಒತ್ತುವರಿ, ಒತ್ತುವರಿದಾರರನ್ನು ಒಕ್ಕಲೆಬ್ಬಿಸತ್ತಕ್ಕದ್ದಲ್ಲ ಎಂದು ತಿಳಿಸಲಾಗಿದೆ.

ಆದ್ದರಿಂದ, ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ಹಕ್ಕು ಕಾಯ್ದೆಯಲ್ಲಿ ಅರ್ಜಿಗಳು ಇತ್ಯರ್ಥವಾಗುವವರೆಗೆ ಅರಣ್ಯ ಪ್ರದೇಶದ ಒತ್ತುವರಿಯನ್ನು ತೆರೆವುಗೊಳಿಸಿರುವುದಿಲ್ಲ. ಆದರೆ ಯಾವುದೇ ಹೊಸದಾಗಿ ಅರಣ್ಯ ಪ್ರದೇಶದ ಒತ್ತುವರಿಯನ್ನು ತಡೆಯಲಾಗುತ್ತಿದ್ದು, ಕಾನೂನಿನಂತೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ಹಾಗೂ ಅರಣ್ಯ ವಾಸಿಗಳಿಗೆ ಯಾವುದೇ ರೀತಿಯ ಕಿರುಕುಳ ಕೊಡುತ್ತಿಲ್ಲ ಎಂದು ತಿಳಿಸಿದೆ.

(ಈಶ್ವರ ಬಿ. ಖಂಡ್ರೆ)
ಅರಣ್ಯ, ಜೀವಿಪರಿಸ್ಥಿತಿ ಮತ್ತ ಪರಿಸರ ಸಚಿವರು

**ಈಶ್ವರ ಬಿ. ಖಂಡ್ರೆ**
**ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು**

**ಕಡತ ಸಂಖ್ಯೆ: ಎಫ್‌ಇಇ 394 ಎಫ್‌ಎಲ್‌ಎಲ್ 2024 (ಇ)**